ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ನಾನು ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎ. ತಿಪ್ಪೆಸ್ವಾಮಿಯವರ ಪರವಾಗಿ ಈ ಕೆಳಕಂಡ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ನೇಮಕಾತಿ ನಿಯಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಮೂರನೇ ವರದಿಯನ್ನು ಒಪ್ಪಿಸುವುದು.

ಶ್ರೀ ಎನ್. ಹೆಚ್. ಗೌಡ.—ಸನ್ಮಾನ್ಯ ಅಧ್ಯಕ್ಷರೇ. ನಾನು ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಧರ್ಮಪ್ಪನವರ ಪರವಾಗಿ ಈ ಕೆಳಕಂಡ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.—

ಸಾರ್ವಜನಿಕ ಉದ್ಯಮಗಳಲ್ಲಿ ಹಿಂದುಳಿದ ವರ್ಗಗಳವರಿಗೆ ನೇಮಕಾತಿಗಳಲ್ಲಿ ಮೀಸಲಾತಿ ನಿಯಮಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ನಾಲ್ಕನೆಯ ವರದಿಯನ್ನು ಒಪ್ಪಿಸುವುದು.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಗಿದೆ.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಸಂಕೇಶ್ವರದ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಪ್ರೊಸೆಸಿಂಗ್ ಸೊಸೈಟಿಯ ಹಣಕಾಸಿನ ತೊಂದರೆಯ ಬಗ್ಗೆ ಮನವಿಯನ್ನು ಹಾಗೂ ಶ್ರೀ ಜಿ. ಎಸ್. ಆಚಾರ್‌ರವರ ಹೆಸರಿನಲ್ಲಿರುವ ಕುಂದಾಪುರ ತಾಲ್ಲೂಕಿನ ತ್ರಾಸಿ ಗ್ರಾಮದ ಹೊಸಪೇಟೆಯಲ್ಲಿ ದಾರಿದೀಪ ಹಾಗೂ ಮನೆಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯ ಬಗ್ಗೆ ಮನವಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ರಾಯಚೂರು ಥರ್ಮಲ್ ವಿದ್ಯುತ್ ಕೇಂದ್ರದ ಎರಡನೇ ಘಟಕವು ಎಣ್ಣೆ ಸೋರಿಕೆಯಿಂದ ವಿಫಲವಾಗಿರುವ ವಿಷಯದ ಬಗ್ಗೆ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.—

ಶ್ರೀ ಜೆ. ಹೆಚ್. ಪಟೇಲ್.—ಸನ್ಮಾನ್ಯ ಅಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಗೆ ಸಂಬಂಧ ಪಟ್ಟ ಉತ್ತರವು ರೆಡಿಯಾಗಿದೆ, ಆದರೆ ಕಾಪಿಸ್ ಇನ್ನು ಬಂದಿಲ್ಲ, ಬಂದ ನಂತರ ಇದನ್ನು ತೆಗೆದು ಕೊಳ್ಳೋಣ.

ಸಭಾಧ್ಯಕ್ಷರು.—ಕಾಪಿಸ್ ಬಂದ ನಂತರ ಇದನ್ನು ತೆಗೆದುಕೊಳ್ಳೋಣ.

ರಾಜ್ಯದಲ್ಲಿ ತರಕಾರಿ ಬೆಳೆಯಿ ಬೆಲೆಗಳು ಕುಸಿದಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿರುವ ಬಗ್ಗೆ.

SRI R. VENKATRAMAIAH.—I call the attention of the Hon'ble Minister of State for Agriculture and Horticulture to the hardship caused to the farmers on account of fall in prices of vegetables.

ಸಂಬಂಧಪಟ್ಟ ಮಂತ್ರಿಗಳು ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮಂತ್ರಿಗಳು ಅವರ ವಿಷಯ ಬರುವಾಗ ಈ ಸಭೆಯಲ್ಲಿ ಹಾಜರಾಗಿರಬೇಕಾಗಿತ್ತು, ಇದಕ್ಕಿಂತ ಮುಖ್ಯವಾದ ಕೆಲಸ ಅವರಿಗೆ ಬೇರೆ ಏನು ಇದೆ. ಅವರಿಗೆ ನಿನ್ನೆಯೇ ಅಜೆಂಡಾ ಬಂದಿದೆ, ಅದು ಅವರಿಗೆ ಗೊತ್ತಿಲ್ಲವೇ ?